ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ಎಷ್ಟು ಜನ ಸತ್ತಿದ್ದಾರೆ, ಸತ್ತಿಲ್ಲ ಎನ್ನುವ ಬಗ್ಗೆ ಮಾಹಿತಿ ನನ್ನ ಹತ್ತಿರವಿಲ್ಲ. ನಮ್ಮ ದಾಖಲೆ ಪ್ರಕಾರ ಸಿಕ್ಕಿದ ಅಂಕಿಸಂಖ್ಯೆಗಳನ್ನು ಹೇಳಿದ್ದೇನೆ ಅಷ್ಟೆ.

ಶ್ರೀ ವಿ. ಮುನಿಯಪ್ಪ.—ಮಾನ್ಯ ಶ್ರೀ ತಮ್ಮಯ್ಯನವರು ಹೇಳಿದ ಹಾಗೆ ವಿಲೇಜ್ ಅಕೌಂಟೆಂಟ್ ಗಳನ್ನು ನೇಮಿಸಿಕೊಳ್ಳುವಾಗ ಯಾರು ಶ್ಯಾನುಭೋಗರು ಎಸ್. ಎಸ್. ಎಲ್. ಸಿ., ಪಿ. ಯು. ಸಿ ಯಾಗಿತ್ತೋ ಅಂಥವರಿಗೆ ವೇಟ್ ಏಜ್ ಕೊಟ್ಟು ಸೆಲೆಕ್ಷನ್ ಮಾಡಿದ್ದೀರಿ. ಅದೇ ರೀತಿ ಮಾಜೀ ಪಟೇಲರ ಮಕ್ಕಳು ಪಿ. ಯು. ಸಿ., ಎಸ್. ಎಸ್. ಎಲ್. ಸಿ. ಆಗಿದ್ದರೆ ಅವರಿಗೂ ಸಹ ವಿಲೇಜ್ ಅಕೌಂಟೆಂಟ್ ಹುದ್ದೆಗೆ ನೇಮಿಸಿಕೊಳ್ಳುವಾಗ ಅರ್ಹತೆ ಇರುವಂಥವರಿಗೆ ವೇಟೇಜ್ ಕೊಟ್ಟು ಉದ್ಯೋಗವನ್ನು ದೊರಕಿಸಿ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

೧೨-೩೦ ಪಿ. ಎಂ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರುವ ಹಾಗೆ ನೇಮಕಾತಿ ಮಾಡುವಾಗ ರಿಸರ್ವೇಷನ್ ಪಗ್ಗೆರೆ ಮಾಡಬೇಕಾಗುತ್ತದೆ. ನಮ್ಮ ಮುಂದೆ ಇಟ್ಟಿರತಕ್ಕ ಮನವಿ ಏನೆಂದರೆ ಅವರಿಗೆ ಒಂದು ಪರಿಹಾರವನ್ನು ಕೊಡಬೇಕೆಂದು. ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ ಎಂದು ಆಗಲೇ ಹೇಳಲಾಗಿದೆ. ಮತ್ತೆ ಬೇರೆಯದನ್ನು ಪರಿಶೀಲನೆ ಮಾಡುವಸಂದರ್ಭ ಇಲ್ಲ.

ಶ್ರೀ ಜಿ. ಕೆ. ತಕ್ಕೇಡ್.—ಬೆಳಗಾಂ ವಿಭಾಗದಲ್ಲಿ ೧೦-೧೫ ವರ್ಷಗಳ ಕಾಲ ಪಟೇಲರು ಸೇವೆಯನ್ನು ಸಲ್ಲಿಸಿದ್ದರೂ ಕೂಡ ಇಲ್ಲಿಯವರೆಗೆ ಅವರಿಗೆ ಮುಟ್ಟಬೇಕಾದ ಪರಿಹಾರ ಧನ ಮುಟ್ಟಿಲ್ಲ. ಆ ಬಗ್ಗೆ ಕೂಡ ಮನವಿ ಪಾಡಿದ್ದೇವೆ. ಈ ಒಂದು ಅಂತೋಷ ಇಡೀ ರಾಜ್ಯದಲ್ಲೇ ಇದೆ; ಆದರಲ್ಲೂ ಬೆಳಗಾಂನಲ್ಲಿ ಹೆಚ್ಚಾಗಿದೆ. ದೊಡ್ಡ ದೊಡ್ಡ ಮನೆತನಗಳಿಂದ ಬಂದ ಪಟೇಲರಿಗೆ ಇದುವರೆಗೆ ಸಂಭಾವನೆ ಮುಟ್ಟಿಲ್ಲ. ಈ ದೃಷ್ಟಿಯಿಂದ ಅವರಿಗೆ ಮುಟ್ಟಬೇಕಾದ ಸಂಭಾವನೆ ಬಗ್ಗೆ ಆಲೋಚನೆ ಮಾಡುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಕಾನೂನುಬದ್ಧವಾಗಿ ಅವರಿಗೆ ಸಂಭಾವನೆ ಸಿಗಬೇಕಾದ ಸನ್ನಿವೇಶದಲ್ಲಿ ಕೊಡಬೇಕಾಗುತ್ತದೆ. ಯಾವ ತಾಲ್ಲೂಕಿನಲ್ಲಿ, ಯಾವ ಭಾಗದಲ್ಲಿ ಎಷ್ಟು ಜನರದ್ದು ಬಾಕಿ ಇದೆ ಎಂಬ ವಿವರ ಕೊಟ್ಟರೆ ಖಂಡಿತವಾಗಿ ಕೊಡಿಸುತ್ತೇನೆ.

ಶ್ರೀ ಡಿ. ಟಿ. ರಾಮು.—ಒಂದೆರಡು ವರ್ಷಗಳ ಅವಧಿಯಲ್ಲಿ ಈ ಒಂದು ಸಮಸ್ಯೆಯನ್ನು ಬಗೆ ಹರಿಸಂತ್ತೇವೆಂಬ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ನಿರ್ದಿಷ್ಟವಾದ ಅವಧಿಯಲ್ಲಿ ಎಲ್ಲವನ್ನು ತೀರ್ಮಾನ ಮಾಡುವುದಕ್ಕಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಪರಿಶೀಲನೆ ಮಾಡುತ್ತೇವೆಂದರೆ ನಮಗೂ ಕೂಡ ಅಷ್ಟೇ ಕಳಕಳಿ ಇದೆ ಎಂಬುದನ್ನು ಮನಗಾಣಬೇಕು.

Strength of SC./ST. Hostels in Kolar and Bangalore District.

103 Sri P. N. Reddy (Malur)—

Sri B. V. Ramachandra Reddy.—(Varthur)

Will the Minister for Social Welfare and Backward Classes be pleased to state.—

(a) the number of backward class girls and Scheduled Castes and Scheduled Tribes Hostels and also general Hostels in Kolar and Bangalore districts, the number of students who are studying in these institutions ;

(b) the number of boys and girls students who have studied in the above student hostels, have appeared for SSLC and II year PUC examinations during this year; The number of persons whohave passed (Particulars of passes in I, II and III Classes may please be furnished) ?

SRI P. VENKATARAMANA.—(Minister for Social Welfare and Backward Classes)

		Bangalore	Kolar
(a)	Backward class Girls' Hostels	5	2
	out of this, the number of students who are studying	203	89
	The number of Seheduled Castes and Scheduled Tribes Students Hostels	34	27
	O utof this, the number of students who are studying	2180	1203
(b)	The number of backward elass girls who have appeared for the SSLC examination	3	11

	Bangalore	Kolar
The number of persons who have passed	1	4
I Class	No	No
II ,,	No	No
III ,,	1	
The number of persons who have apppared for the Pre-University		
II year	61	31
The number of persons who have passed	42	20
I Class	2	3
II ,,	12	2
III ,,	28	15

The number of students who had studied in Scheduled Castes and Scheduled Tribes Hostels and appeared for the SSLC examination	312	194
The number of persons who have passed	151	72
I Class	11	2
II ,,	37	3
III ,,	103	67
Total	302	144

(There is no hostel run by the Social Welfare Department for the students of Pre-University).

ಶ್ರೀ ಪಿ.ಎನ್. ರೆಡ್ಡಿ.—ನಾನು ಹಾಕಿದ ಪ್ರಶ್ನೆಗೆ ಪೂರ್ಣ ಉತ್ತರ ಬಂದಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಈ ಪ್ರಶ್ನೆಯನ್ನು ಸಂಬಂಧಪಟ್ಟ ಅಧಿಕಾರಿಗಳು ಓದಿದ್ದಾರೋ ಇಲ್ಲವೋ ಎಂಬ ಅನುಮಾನ ಕೂಡ ಆಗುತ್ತಿದೆ. ನನ್ನ (ಆ) ಪ್ರಶ್ನೆಯಲ್ಲಿ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಸಾರ್ವಜನಿಕ ಹಾಸ್ಟೆಲುಗಳು ಎಷ್ಟಿವೆ ಎಂದು ಕೇಳಿರುವುದಕ್ಕೆ ಉತ್ತರವನ್ನೇ ನೀಡಿಲ್ಲ ನನಗೆ ಮುಖ್ಯವಾಗಿ ಸಾರ್ವಜನಿಕರ ಹಾಸ್ಟೆಲುಗಳ ಮಾಹಿತಿ ಬೇಕಾಗಿತ್ತು. ಆದ್ದರಿಂದ ಈ ಪ್ರಶ್ನೆಯನ್ನು ತಡೆಹಿಡಿದು ಪೂರಾ ಉತ್ತರ ಕೊಡುವ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಅಧ್ಯಕ್ಷರನ್ನು ಕೇಳಿಕೊಳ್ಳುತ್ತೇನೆ. ಜೊತೆಗೆ ಇನ್ನೊಂದು ಏನಾಗಿದೆ ಎಂದರೆ, ಅಧಿಕಾರಿಗಳಿಗೆ ಕೂಡುವ ಮತ್ತು ಭಾಗಾಕಾರ ಲೆಕ್ಕ ಬರುವುದಿಲ್ಲವೆಂದು ಕಾಣುತ್ತದೆ. ಉತ್ತೀರ್ಣರಾದವರ ಸಂಖ್ಯೆ ಬೆಂಗಳೂರಿನಲ್ಲಿ ೧೫೧ ಎಂದೂ ಮತ್ತು ಕೋಲಾರದಲ್ಲಿ ೭೨ ಎಂದೂ ಕೊಟ್ಟಿದ್ದಾರೆ, ಆಮೇಲೆ ಕೊನೆಯಲ್ಲಿ ಒಟ್ಟು ೩೦೨ ಹಾಗೂ ೧೪೪ ಎಂದು ಕೊಟ್ಟಿದ್ದಾರೆ. ಇದನ್ನೆಲ್ಲ ಆವರು ಸರಿಯಾಗಿ ನೋಡಿಲ್ಲವೆಂದು ಕಾಣುತ್ತದೆ, ಮಾನ್ಯ ಮಂತ್ರಿಗಳು ಇದನ್ನು ವಿಶದವಾಗಿ ನೋಡಿ ಉತ್ತರಿಸುತ್ತಾರೆಯೇ?

ಶ್ರೀ ಪಿ. ವೆಂಕಟರಮಣ.—ಹಿಂದುಳಿದ ವರ್ಗಗಳ ಹಾಸ್ಟೆಲ್, ಹರಿಜನ ಗಿರಿಜನರ ಹಾಸ್ಟೆಲ್ಲ ಎಂದು ಅಲ್ಲ ಕರೆಯುವುದು, ಸಾರ್ವಜನಿಕ ವಿದ್ಯಾರ್ಥಿ ನಿಲಯಗಳು ಎಂದೇ ಕರೆಯುವುದು. ಜನರಲ್ ಹಾಸ್ಟೆಲ್ ಅಥವಾ ಹಿಂದುಳಿದ ವರ್ಗಗಳ ಹಾಸ್ಟೆಲ್ ಎಂದು ಬರೆದರೂ ಬ್ರಾಕೆಟ್ಟಿನಲ್ಲಿ ಸಮಾಜ ಕಲ್ಯಾಣ ಇಲಾಖೆ ಎಂದು ಹಾಕಿರುತ್ತೇವೆ. ಪ್ರತ್ಯೇಕವಾಗಿ ಹರಿಜನಗಿರಿಜನರ ಹಾಸ್ಟೆಲ್ ಆಗಲೀ ಹಿಂದುಳಿದ ವರ್ಗದವರ ಹಾಸ್ಟೆಲ್ ಎಂದಾಗಲೀ ನಡೆಸುತ್ತಿಲ್ಲ. ಈಗ ನಿಮಗೆ ಯಾವ ಹಾಸ್ಟೆಲ್ ಮಾಹಿತಿ ಬೇಕೆಂಬುದನ್ನು ಹೇಳಿ, ಕೊಡುತ್ತೇನೆ.

ಶ್ರೀ ಪಿ.ಎನ್. ರೆಡ್ಡಿ.—ಹಿಂದುಳಿದ ವರ್ಗಗಳ ಹಾಸ್ಟೆಲ್ದದ್ದೇ ಹೇಳಿ.

ಶ್ರೀ ಪಿ. ವೆಂಕಟರಮಣ.—ಆಯಿತು. ಬೆಂಗಳೂರು ಜಿಲ್ಲೆಯಲ್ಲಿ ಒಟ್ಟು ೨೨ ಹಾಸ್ಟೆಲುಗಳಿದ್ದು ಅವುಗಳಲ್ಲಿ ೫ ಬಾಲಕಿಯರ ಹಾಸ್ಟೆಲುಗಳೂ ಮತ್ತು ಕೋಲಾರ ಜಿಲ್ಲೆಯಲ್ಲಿ ೧೭ ಹಾಸ್ಟೆಲುಗಳಿದ್ದು ಅವುಗಳಲ್ಲಿ ೨ ಬಾಲಕಿಯರ ಹಾಸ್ಟೆಲುಗಳು ಇವೆ.

ಶ್ರೀ ಪಿ.ಎನ್. ರೆಡ್ಡಿ.—ಅಲ್ಲಿ ಉತ್ತೀರ್ಣರಾದವರ ಸಂಖ್ಯೆಯನ್ನು ಹೇಳುತ್ತೀರಾ?

ಶ್ರೀ ಪಿ. ವೆಂಕಟರಮಣ.—ಸದರಿ ಜಿಲ್ಲೆಗಳಲ್ಲಿ ವ್ಯಾಸಂಗ ಮಾಡುತ್ತಿರತಕ್ಕ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆಯನ್ನು ಹೇಳುವುದಾದರೆ, ಬೆಂಗಳೂರು ಜಿಲ್ಲೆಯಲ್ಲಿ ಬಾಲಕರು ೧೦೦೫, ಬಾಲಕಿಯರು ೨೦೫ ಮತ್ತು ಕೋಲಾರ ಜಿಲ್ಲೆಯಲ್ಲಿ ಬಾಲಕರು ೭೯೮, ಬಾಲಕಿಯರು ೯೯. ಆದರಲ್ಲಿ ಬೆಂಗಳೂರು ಜಿಲ್ಲೆಯಲ್ಲಿ ಎಸ್.ಎಸ್ ಎಲ್.ಸಿ. ಪರೀಕ್ಷೆಗೆ ಹಾಜರಾದವರು ೨೦೬ ಜನ ಮತ್ತು ತೇರ್ಗಡೆಯಾದವರು

೭೫ ಜನ ಆ ಪೈಕಿ ಪ್ರಥಮ ದರ್ಜೆಯಲ್ಲಿ ೩, ದ್ವಿತೀಯ ದರ್ಜೆಯಲ್ಲಿ ೧೨ ಮತ್ತು ತೃತೀಯ ದರ್ಜೆಯಲ್ಲಿ ೬೦ ಮಂದಿ ಉತ್ತೀರ್ಣರಾಗಿದ್ದಾರೆ. ಪಿ.ಯು.ಸಿ. ೨ನೇ ವರ್ಷದ ಪರೀಕ್ಷೆಗೆ ಹಾಜರಾದವರು ೬೧ ಜನ ಮತ್ತು ತೇರ್ಗಡೆಯಾದವರು ೪೨ ಜನ–ಆ ಪೈಕಿ ಪ್ರಥಮ ದರ್ಜೆಯಲ್ಲಿ ೨, ದ್ವಿತೀಯ ದರ್ಜೆಯಲ್ಲಿ ೧೨ ಮತ್ತು ತೃತೀಯ ದರ್ಜೆಯಲ್ಲಿ ೨೮ ಮಂದಿ ಉತ್ತೀರ್ಣರಾಗಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾದವರು ೮೯ ಜನ ಮತ್ತು ಪಾಸಾದವರು ೩೪ ಜನ ಆ ಪೈಕಿ ಪ್ರಥಮ ದರ್ಜೆಯಲ್ಲಿ ೧, ದ್ವಿತೀಯ ದರ್ಜೆಯಲ್ಲಿ ೫ ಮತ್ತು ತೃತೀಯ ದರ್ಜೆಯಲ್ಲಿ ೨೮ ಜನ ತೇರ್ಗಡೆಯಾಗಿದ್ದಾರೆ. ೨ನೇ ವರ್ಷದ ಪಿ.ಯು.ಸಿ. ಪರೀಕ್ಷೆಗೆ ಹಾಜರಾದವರು ೩೧ ಜನ ಮತ್ತು ತೇರ್ಗಡೆಯಾದವರು ೨೦ ಜನ ಆ ಪೈಕಿ ಪ್ರಥಮ ದರ್ಜೆಯಲ್ಲಿ ೩, ದ್ವಿತೀಯ ದರ್ಜೆಯಲ್ಲಿ ೨ ಮತ್ತು ತೃತೀಯ ದರ್ಜೆಯಲ್ಲಿ ೧೫ ಮಂದಿ ಉತೀರ್ಣರಾಗಿದ್ದಾರೆ.

ಶ್ರೀ ಪಿ.ಎನ್. ರೆಡ್ಡಿ.—ಉತ್ತರದ ಕೊನೆಯಲ್ಲಿ, ಪಿಯುಸಿ ವಿದ್ಯಾರ್ಥಿಗಳಿಗಾಗಿ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳನ್ನು ನಡೆಸುತ್ತಿಲ್ಲ ಎಂದು ಬ್ರಾಕೆಟ್ಟಿನಲ್ಲಿ ಹಾಕಿದ್ದೀರಿ. ಹಿಂದುಳಿದ ವರ್ಗಗಳ ಹಾಸ್ಟೆಲುಗಳಲ್ಲಿ ಎಸ್‌ಎಸ್‌ಎಲ್‌ಸಿ. ಪಾಸಾದ ಮೇಲೆ ಮೊದಲ ಮತ್ತು ಎರಡನೇ ವರ್ಷದ ಪಿಯುಸಿ. ತರಗತಿಗಳಿಗೆ ಸೇರಿಕೊಳ್ಳುವ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಕೊಡುತ್ತಾರೆ. ಆದರೆ ನೀವು ಇಲ್ಲಿ ಇಲ್ಲ ವೆಂದು ಹೇಳಿದ್ದೀರಿ. ಹಿಂದುಳಿದ ವರ್ಗಗಳ ಹಾಸ್ಟೆಲುಗಳಲ್ಲಿ ಮತ್ತು ಹರಿಜನಗಿರಿಜನರ ಹಾಸ್ಟೆಲುಗಳಲ್ಲಿ ಪಿಯುಸಿ. ವಿದ್ಯಾರ್ಥಿಗಳಿಗೆ ಅವಕಾಶ ಕೊಡುತ್ತಿದ್ದಾರೆ. ಆದರೆ ನೀವು ಆ ವಿದ್ಯಾರ್ಥಿಗಳಿಗೆ ಹಾಸ್ಟೆಲು ಗಳನ್ನೇ ನಡೆಸುತ್ತಿಲ್ಲವೆಂದು ಹೇಳಿದ್ದೀರಿ.

ಶ್ರೀ ಪಿ. ವೆಂಕಟರಮಣ.—ಅದು ಸರಿಯಲ್ಲ. ಆ ವಿದ್ಯಾರ್ಥಿಗಳಿಗೂ ಕೂಡ ಹಾಸ್ಟೆಲುಗಳನ್ನು ನಡೆಸುತ್ತಿದ್ದೇವೆ. ಆದರ ಸಂಖ್ಯೆಯನ್ನು ಕೂಡ ಹೇಳುತ್ತೇನೆ.. ಬೆಂಗಳೂರಿನಲ್ಲಿರತಕ್ಕ ೩ ಹಾಸ್ಟೆಲು ಗಳಲ್ಲಿ ೭೦೦ ಮಂದಿ ವಿದ್ಯಾರ್ಥಿಗಳೂ, ಬೆಂಗಳೂರು ರೂರಲ್‌ನ ಒಂದು ಹಾಸ್ಟೆಲಿನಲ್ಲಿ ೧೦೦ ಮಂದಿ ವಿದ್ಯಾರ್ಥಿಗಳೂ ಮತ್ತು ಕೋಲಾರದ ೩ ಹಾಸ್ಟೆಲುಗಳಲ್ಲಿ ೫೦೦ ವಿದ್ಯಾರ್ಥಿಗಳು ಇದ್ದಾರೆ.

ಶ್ರೀ ಬಿ.ವಿ. ರಾಮಚಂದ್ರ ರೆಡ್ಡಿ,—ನಮ್ಮಲ್ಲಿ ಜನಸಂಖ್ಯೆಯ ಅರ್ಧ ಭಾಗ ಹೆಣ್ಣು ಮಕ್ಕಳು ಇದ್ದಾರೆ. ಆದರೆ ಹೆಣ್ಣು ಮಕ್ಕಳಿಗಾಗಿ ಇರುವ ಹಾಸ್ಟೆಲುಗಳು ಬೆಂಗಳೂರು ಜಿಲ್ಲೆಯಲ್ಲಿ ೫ ಬೆಂಗಳೂರು ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಹೆಣ್ಣುಮಕ್ಕಳು ಸುಮಾರು ೫ ಲಕ್ಷದಷ್ಟು ಇದ್ದಾರೆ. ಇಷ್ಟು ಜನ ಹೆಣ್ಣು ಮಕ್ಕಳಿಗೆ ಕೇವಲ ೫ ಹಾಸ್ಟೆಲುಗಳು ಸಾಕಾಗುತ್ತವೆಯೆ? ಇಲ್ಲ. ಆದ್ದರಿಂದ, ಈ ಬಾಬಿಗಾಗಿ ಹೆಚ್ಚಿನ ಗ್ರಾಂಟನ್ನು ಮಂಜೂರ್ಮಾಡಿ ಹೆಚ್ಚುವರಿ ಹಾಸ್ಟೆಲುಗಳನ್ನು ತೆರೆಯುತ್ತೀರಾ?

ಶ್ರೀ ಪಿ. ವೆಂಕಟರಮಣ.—ಬೇಡಿಕೆ ಬಂದರೆ ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಮಂಜೂರ್ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಪಿ.ಎನ್. ರೆಡ್ಡಿ.—ಸೆನ್ಸಸ್ ಪ್ರಕಾರ ಈ ರಾಜ್ಯದಲ್ಲಿ ಒಟ್ಟು ಹಿಂದುಳಿದ ವರ್ಗಗಳ ಸಂಖ್ಯೆ ಒಂದು ಕೋಟಿ ೬೩ ಲಕ್ಷ ಇದೆ ಎಂದು ತಿಳಿದು ಬಂದಿದೆ. ಅದಕ್ಕನುಗುಣವಾಗಿ ಹಿಂದುಳಿದ ವರ್ಗ ಗಳ ಹಾಸ್ಟೆಲುಗಳನ್ನು ಕೊಡುತ್ತಿದ್ದೀರಾ? ಕೊಡದಿದ್ದರೆ ಏತಕ್ಕೆ ಕೊಡುತ್ತಿಲ್ಲ? ಒಟ್ಟು ರಾಜ್ಯದಲ್ಲಿ ಹಿಂದುಳಿದ ವರ್ಗಗಳಿಗ ೩೮೫ ಹಾಸ್ಟೆಲಂಗಳನ್ನು ಮತ್ತು ಶೋಷಿತ ವರ್ಗಕ್ಕೆ ೪೮೫ ಹಾಸ್ಟೆಲುಗಳನ್ನು ತರೆದಿದ್ದೀರಿ. ಒಂದು ಕೋಟಿ ೬೩ ಲಕ್ಷ ಜನಸಂಖ್ಯೆಗೆ ಕೇವಲ ೩೮೫ ಹಾಸ್ಟೆಲಂಗಳನ್ನು ತೆರೆದರೆ ಹೇಗೆ? ಆ ವರ್ಗದವರಿಗೂ ಸಹ ಮಾನವೀಯತೆಯ ದೃಷ್ಟಿಯಿಂದ ಹೆಚ್ಚಾಗಿ ಹಾಸ್ಟೆಲುಗಳನ್ನು ತೆರೆಯುತ್ತೀರಾ? ಬೆಂಗಳೂರು ಹಾಗೂ ಕೋಲಾರ ಜಿಲ್ಲೆಗಳಲ್ಲಿರತಕ್ಕ ಹಿಂದುಳಿದ ವರ್ಗಕ್ಕೆ ಸೇರಿದ ಜನಸಂಖ್ಯೆ ಎಷ್ಟು?

ಶ್ರೀ ಪಿ. ವೆಂಕಟರಮಣ.—ಅವರು ಜನಸಂಖ್ಯೆ ಎಷ್ಟು ಎಂದು ಕೇಳುತ್ತಿದ್ದಾರೆ, ಆ ಮಾಹಿತಿ ಈಗ ನನ್ನ ಹತ್ತಿರ ಇಲ್ಲ. ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಾಗಿ ಹಾಸ್ಟೆಲುಗಳನ್ನು ತೆರೆಯುವುದಕ್ಕೆ ಅವಕಾಶ ಮಾಡಬೇಕೆಂಬ ಸಲಹೆ ಕೊಟ್ಟಿದ್ದಾರೆ. ಮಾನ್ಯ ರಾಮಚಂದ್ರ ರೆಡ್ಡಿಯವರಿಗೆ ಹೇಳಿದ ಹಾಗೆ, ಜನರಿಂದ ಬೇಡಿಕೆಗಳು ಬಂದಾಗ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಹೊಸದಾಗಿ ಹಾಸ್ಟೆಲಂ ಗಳನ್ನು ಮಂಜೂರ್ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.